

ಆಯ್ತು. ಅವರ್ದೂ ಸಿ.ಡಿ. ಇತ್ತು. ಆದ್ರೆ ರಿಲೀಸ್‌ಗೆ ಡಿಸ್ಟ್ರಿಬ್ಯೂಟರ್ ಸಿಗ್ಲಿಲ್ಲ.'

'ಸ್ವಾಮೀಜಿ, ನಿಮ್ಮ ದೇಶದಲ್ಲಿ ಸಿ.ಡಿ. ಪ್ರಾಬ್ಲಂ ಹೇಗೆ?' ಎಂದು ವಿಶ್ವ ವಿಚಾರಿಸಿದ.

'ನಮ್ಮ ದೇಶದಲ್ಲಿ ಸಿ.ಡಿ. ಅಫೆನ್ಸ್ ಅಲ್ಲ. ಒಬ್ಬ ಮಿನಿಸ್ಟರ್‌ಗೆ ಎರಡು ವ್ಯಕ್ತಿತ್ವ ಇರುತ್ತೆ. ಅವನು ಡೇ ಟೈಮಲ್ಲಿ ಮಿನಿಸ್ಟರು, ಪೊಲಿಟಿಕಲ್ ಲೈಫ್ ಇರುತ್ತೆ. ನೈಟ್ ಟೈಮಲ್ಲಿ ಪರ್ಸನಲ್ ಲೈಫ್ ಇರುತ್ತೆ. ಅವನಿಗಿಷ್ಟವಾದದ್ದು ತಿನ್ನಬಹುದು, ಕುಡೀಬಹುದು, ಚೆಡ್ಡಿ, ಬನಿಯನ್‌ಗಳಲ್ಲಿ ವಿಧಾನಸೌಧ ಸುತ್ತಬಹುದು. We cannot question.'

'ನಿಮ್ಮ ದೇಶದಲ್ಲಿ ಸಚಿವರ ಸಿ.ಡಿ.ನ ನ್ಯಾಷನಲ್ ಪ್ರಾಬ್ಲಮ್ ಅಂತ ನೋಡ್ತೀರ?'

ಕೈಲಾಸಾನಂದ ಸ್ವಾಮಿಗಳು ತಮ್ಮ ದೇಶದ ನೀತಿ, ನಿಯಮಗಳನ್ನು ಸವಿಸ್ತಾರವಾಗಿ ಹೇಳಿದರು.

'ನಮ್ಮಲ್ಲಿ ಕಠಿಣ ನಿಯಮ ಇಲ್ಲ. ತಪ್ಪು ಮಾಡಿದವರಿಗೆ ಕ್ಷಮೆ ಇದೆ. ಮೂರು ಸಲ ಸಿ.ಡಿ. ರಿಲೀಸ್ ಮಾಡಿದ್ರೆ ಎಕ್ಸ್‌ಕ್ಯೂಸ್ ಇದೆ. Just like Signal Jump. ನಾಲ್ಕನೇ ಸಲ ಸಿ.ಡಿ. ಮಾಡಿದ್ರೆ ಆತನ ಮೇಲೆ ಆಕ್ಷನ್ ತಗೋತೀವಿ.'

ವಿಶ್ವನಿಗೆ ಖುಷಿಯಾಯಿತು.

'ಸೀಡೀಲಿ ಬರೋ ಲೇಡಿ ಬಗ್ಗೆ ಏನ್ಹೇಳ್ತೀರ?'

'Without lady no C.D. ಸೀಡೀಲಿ ಸೇಮ್ ಲೇಡಿ ಮತ್ತೆ ಮತ್ತೆ ಬಂದ್ರೆ ಹ್ಯೂಮನ್ ಕಮಿಟಿಯವರು ನೋಡ್ತಾರೆ. ಸೀಡೀಲಿ ಡಿಫರೆಂಟ್ ಲೇಡೀಸ್ ಬರ್ತಿದ್ರೆ ನಾವು ಅದನ್ನ ವೆಟರಿನರಿ ಡಿಪಾರ್ಟ್‌ಮೆಂಟ್‌ಗೆ ಕಳಿಸ್ತೀವಿ.'

'ನಿಮ್ಮ ದೇಶದ ಪಾಲಿಟಿಕ್ಸಲ್ಲಿ ಸಿ.ಡಿ. ಬಂದ ತಕ್ಷಣ ಎದುರಾಳಿಗಳು ರಾಜೀನಾಮೆ ಕೇಳ್ತಾರಾ?'

'ನೋ, ನೆವರ್, ನಮ್ಮಲ್ಲಿ ಮಿನಿಸ್ಟರ್ಸ್ ರಾಜೀನಾಮೆ ಕೇಳೊಲ್ಲ. ಇದು ಪೊಸಿಷನ್‌ಗೆ ಸಂಬಂಧಪಟ್ಟಿದ್ದಲ್ಲ. Resignation is not related to Designation.'

'ಮೂರು ಸಲ ಸಿ.ಡಿ. ರಿಪೀಟ್ ಆದ್ರೆ?'

'ಅದಕ್ಕೊಂದು ಕಮಿಟಿ ನಮ್ಮಲ್ಲಿದೆ. ಮೊದಲು ಸಿ.ಡಿ.ಗಳು ಮಾಡಿ ಸಿಕ್ಕಿಬಿದ್ದ ಅನುಭವಸ್ಥರನ್ನ ಕಮಿಟಿ ಮೆಂಬರ್ಸ್ ಮಾಡಿರ್ತೀವಿ. ಹೆಚ್ಚು ಸಲ ಸಿಕ್ಕಿಬಿದ್ದವರು ಚೇರ್‌ಮನ್! ಆ ಕಮಿಟಿಗೆ ಕೇಸ್ ಒಪ್ಪಿಸ್ತೀವಿ. ಅವರು ಹತ್ತು ವರ್ಷಗಳ ಒಳಗೆ ರಿಪೋರ್ಟ್ ಕೊಡಬೇಕು.'

ವಿಶಾಲುಗೆ ಗಾಬರಿಯಾಯಿತು.

'ಹತ್ತು ವರ್ಷಗಳಾ?'

'ಅದಾದ ಮೇಲೆ ಅಪೀಲ್ ಹೋಗೋಕೆ ಹತ್ತು ವರ್ಷ ಟೈಮಿರುತ್ತೆ. ಅಲ್ಲೂ ನ್ಯಾಯ ಸಿಗದಿದ್ರೆ ಅವರು ಡೈರೆಕ್ಟಾಗಿ ನನ್ನ ಹತ್ರ ಅಪೀಲ್ ತರಬಹುದು. ನಾನು ಟೆನ್ ಇಯರ್ಸ್‌ನಲ್ಲಿ ಎಕ್ಸ್‌ಕ್ಯೂಸ್ ಕೊಡ್ತೀನಿ' ಎಂದಾಗ ಇಂಥ ಧರ್ಮರಾಜ್ಯ ಬೇರೆಲ್ಲೂ ಇಲ್ಲ ಅನ್ನಿಸ್ತು.

'ಸ್ವಾಮೀಜಿಗಳೇ, ಉತ್ತರ ಭಾರತದ ಒಬ್ಬ ಮಿನಿಸ್ಟರು ನೂರು ಕೋಟಿ ಹಫ್ತಾ ಪ್ರತಿ ತಿಂಗಳು ತರಬೇಕು ಅಂತ ಪೊಲೀಸ್‌ಗೆ ಹೇಳಿದ್ದು ದೊಡ್ಡ ಕಾಂಟ್ರವರ್ಸಿ ಆಗಿದೆ' ಎಂದು ವಿಶಾಲು ಯಾವುದೋ ನ್ಯೂಸನ್ನು ನೆನಪು ಮಾಡಿಕೊಂಡಳು.

'ಮುಂಚೆಯಿಂದ ಹಫ್ತಾ ಇತ್ತು, ಪಕ್ಷಾಂತರ ಇತ್ತು. ರಾಮಾಯಣದಲ್ಲಿ ವಿಭೀಷಣ ಪಕ್ಷಾಂತರ ಮಾಡಿದ್ದ. It is a global phenomenon. ಸರ್ಕಾರಿ ಆಫೀಸ್‌ಗೆ ಹೋದಾಗ ನಾವು ಭಕ್ಷೀಸ್ ಕೊಡ್ತೀವಿ. ನಮ್ಮ ದೇಶದಲ್ಲಿ ಸರ್ಕಾರಿ ಅಧಿಕಾರಿಗಳು, ಪೊಲೀಸ್ರು ನಗಬಾರ್ದು ಅಂತ ಕಾನೂನು ಮಾಡಿದ್ದೇವೆ.'

'ಯಾಕೆ ನಗಬಾರ್ದು?'

'ಸಕ್ಕರೆ ರೇಟ್ ಕಡಿಮೆ ಆಗುತ್ತೆ.'

'ಕರಪ್ಷನ್ ಕಂಟ್ರೋಲ್ ಮಾಡೋದು ಹ್ಯಾಗೆ?'

'Corona is a world problem, so also corruption. ಲಂಚಗುಳಿತನದ ಆಧಾರದ ಮೇಲೆ ರಾಷ್ಟ್ರಗಳನ್ನ ಲಿಸ್ಟ್ ಮಾಡಿದ್ದಾರೆ. ಲಂಚ ಇಲ್ಲದ ರಾಷ್ಟ್ರ ಅಂದ್ರೆ ಡೆನ್ಮಾರ್ಕ್, ನ್ಯೂಜಿಲೆಂಡ್, ಸಿಂಗಪೂರ್ etc., ಬರೀ ಲಂಚಾನೇ ತುಂಬಿರೋ ರಾಜ್ಯಗಳು ಸೊಮಾಲಿಯಾ, ಲಿಬಿಯಾ, ನೈಜೀರಿಯಾ etc.'

'ನಿಮ್ಮ ದೇಶದಲ್ಲಿ ಲಂಚಗುಳಿತನಾನ ಯಾವ ರೀತಿ ಕಂಟ್ರೋಲ್ ಮಾಡ್ತಿದ್ದೀರ ಸ್ವಾಮೀಜಿ?'

ಸ್ವಾಮೀಜಿ ಗುಟ್ಟು ಬಿಟ್ಟು ಕೊಟ್ಟರು.

'ನಮ್ಮಲ್ಲಿ ಲಂಚ ತಗೊಳ್ಳೋದು ಅಫೆನ್ಸ್ ಅಲ್ಲ. ಜನ ಪ್ರೀತಿಯಿಂದ ಕೊಡೋದು ಭಕ್ಷೀಸ್ ಆಗುತ್ತೆ. ಪ್ರತಿ ತಿಂಗಳು ಕಂತು ಕಟ್ಟೋದು ಹಫ್ತಾ. ನಿತ್ಯ ಮಾಡೋ ಫುಟ್‌ಪಾತ್ ವಸೂಲಿಗೆ ರೋಲ್‌ಕಾಲ್ ಅಂತೀವಿ. ಲಂಚಕ್ಕೆ ಅನೇಕ ಮುಖಗಳಿವೆ. ಆದ್ರೆ ಇಲ್ಲಿ ಒಂದು ಬೇಸಿಕ್ problem ಇದೆ. ಒಂದು ಸ್ಟೇಷನ್‌ಗೂ ಇನ್ನೊಂದು ಸ್ಟೇಷನ್‌ಗೂ ಲಂಚ ಕೇಳೋದರಲ್ಲಿ ವ್ಯತ್ಯಾಸ ಬರಬಾರ್ದು. ಕಳ್ಳನ್ನ ಬಿಡಬೇಕಾದ್ರೆ ಒಬ್ರು ಒಂದು ಸಾವಿರ ರೂಪಾಯಿ ತಗೋತಾರೆ. ಇನ್ನೊಂದು ಸ್ಟೇಷನ್‌ನಲ್ಲಿ ಹತ್ತು ಸಾವಿರ ರೂಪಾಯಿ ಕೇಳ್ತಾರೆ. ಯುನಿಫಾರ್ಮಿಟಿ ಇಲ್ಲ. ಆದ್ದರಿಂದ ನಾವು ಕನಿಷ್ಠ ಬೆಂಬಲ ಬೆಲೆ ರೀತಿ Minimum support price ಅಂತ ಮಾಡಿದ್ದೀವಿ. ಕಳ್ಳನ್ನ ಬಿಡಬೇಕಾದ್ರೆ ಎಲ್ಲಾ ಕಡೇನೂ ಒಂದೇ ರೇಟು ಇರಬೇಕು! ಹಾಗೇನೇ M.R.P. ಅಂತಾನೂ ಇದೆ. ಇದರಿಂದ ಪಬ್ಲಿಕ್‌ಗೆ Exploitation ತಪ್ಪುತ್ತೆ.'

'ಲಂಚ ತಗೊಳ್ಳೋ ಕಾನೂನು ತಂದಿರೋದು ತಪ್ಪು ಅನ್ನುತ್ತಿಲ್ಲ?'

'ಹಾಗೇನಿಲ್ಲ, ನೌಕರನಿಗೆ ಕೆಲಸ ಸಿಗೋಕೆ ಖರ್ಚಾಗಿರುತ್ತೆ. ಪರೀಕ್ಷೇಲಿ ಪಾಸಾಗೋದಕ್ಕೆ ಖರ್ಚು ಮಾಡಿರ್ತಾರೆ. ಪೋಸ್ಟಿಂಗ್ಸ್‌ಗೆ ಖರ್ಚು ಮಾಡ್ತಾರೆ. ಒಬ್ಬ ರೈತ ಬೀಜ ಯಾಕೆ ಹಾಕ್ತಾನೆ? ಫಸಲು ಬರ್ಲಿ ಅಂತ. As you sow, so you reap! ಹಾಕಿದ ಬಂಡವಾಳ ವಾಪಸ್

